11/69/16-17
05/12/16

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002

ಸಂಖ್ಯೆ: BBMP/Addl.Dir/JD NORTH/0454/2013-14 ದಿನಾಂಕ: 05-12-2016

## ಪ್ರಾರಂಭಿಕ ಪ್ರಮಾಣಪತ್ರ

ವಿಷಯ: ಆಸ್ತಿ ಸಂಖ್ಯೆ. 07, (ಸರ್ವೆ ನಂ. 505/1 & 505/2) ಕಲ್ಕೆರೆ ಗ್ರಾಮ, ಹೊರಮಾವು ಉಪ-ವಿಭಾಗ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ವಾರ್ಡ್ ನಂ. 26, ಬೆಂಗಳೂರು, ಇಲ್ಲಿ ನಿರ್ಮಿಸುತ್ತಿರುವ ಬ್ಲಾಕ್ – ಎ ವಸತಿ ಸಮುಚ್ಛಯ ಮತ್ತು ಭಾಗಶಃ ವಾಣಿಜ್ಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JD NORTH/0454/2013-14, ದಿನಾಂಕ: 15-07-2014
2) ತಮ್ಮ ಮನವಿ ಪತ್ರ ದಿನಾಂಕ: 17-09-2016

* * * * * * *

ಆಸ್ತಿ ಸಂಖ್ಯೆ. 07, (ಸರ್ವೆ ನಂ. 505/1 & 505/2) ಕಲ್ಕೆರೆ ಗ್ರಾಮ, ಹೊರಮಾವು ಉಪ-ವಿಭಾಗ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ವಾರ್ಡ್ ನಂ. 26, ಬೆಂಗಳೂರು, ಇಲ್ಲಿ ಬ್ಲಾಕ್ – ಎ ಮತ್ತು ಬಿ ರಲ್ಲಿ ತಳ + ನೆಲ + ಮೇಲಿನ 8 ಅಂತಸ್ತುಗಳ ಒಟ್ಟಾರೆ 382 ಘಟಕಗಳುಳ್ಳ ವಸತಿ ಸಮುಚ್ಛಯ ಕಟ್ಟಡ, ಬ್ಲಾಕ್ – ಎ ಕಟ್ಟಡದ ನೆಲ ಅಂತಸ್ತಿನ ಮುಂಭಾಗದಲ್ಲಿ ಅಲ್ಪ ವಿಸ್ತೀರ್ಣದ ವಾಣಿಜ್ಯ ಉಪಯೋಗ ಹಾಗೂ ಬ್ಲಾಕ್ – ಬಿ ಕಟ್ಟಡದಲ್ಲಿ ಅಲ್ಪ ವಿಸ್ತೀರ್ಣದ ಕ್ಲಬ್‌ಹೌಸ್ ಕಟ್ಟಡ ನಿರ್ಮಿಸಲು ಉಲ್ಲೇಖ (1) ರಂತೆ ಈ ಕಛೇರಿಯಿಂದ ದಿನಾಂಕ: 15-07-2014 ರಂದು ನಕ್ಷೆ ಮಂಜೂರಾತಿಯನ್ನು ಹಾಗೂ ಬ್ಲಾಕ್ – ಬಿ ಕಟ್ಟಡಕ್ಕೆ ದಿನಾಂಕ: 23-09-2016 ರಂದು ಭಾಗಶಃ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿರುತ್ತದೆ. ಸದರಿ ಬ್ಲಾಕ್ – ಎ ವಸತಿ ಸಮುಚ್ಛಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (2) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯನ್ವಯ ಕಟ್ಟಡ ನಿರ್ಮಾಣ ಪ್ರಾರಂಭಿಸಿದ್ದು, ಆರ್.ಸಿ.ಸಿ. ಸ್ತಂಭಗಳನ್ನು ನಿರ್ಮಿಸಿರುವುದನ್ನು ಪರಿವೀಕ್ಷಿಸಲಾಗಿದೆ.

ಅಪರ ನಿರ್ದೇಶಕರು (ನಗರ ಯೋಜನೆ) ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 17-10-2016 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರದ ಸಂಬಂಧ ದಂಡ ಶುಲ್ಕ ಸೇರಿ ಒಟ್ಟು ರೂ. 3,03,000/- ಗಳಿಗೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: RE-ifms 331-TP/00357 ದಿನಾಂಕ: 04-11-2016 ರಂದು ಸಂದಾಯ ಮಾಡಿರುವುದರಿಂದ, ಸದರಿ ಬ್ಲಾಕ್ – ಎ ವಸತಿ ಸಮುಚ್ಛಯ ಮತ್ತು ಭಾಗಶಃ ವಾಣಿಜ್ಯ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ, ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

ಷರತ್ತುಗಳು

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
3. ನಕ್ಷೆ ಮಂಜೂರಾತಿಯ ಸಿಂಧುತ್ವವು ಉಲ್ಲೇಖ (1) ರಂತೆ ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

4. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ-ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

5. ಬ್ಲಾಕ್ – ಎ ಕಟ್ಟಡದಲ್ಲಿ ತಳ + ನೆಲ + ಮೇಲಿನ 4 ಅಂತಸ್ತಿನವರೆಗೆ ಕಟ್ಟಡ ನಿರ್ಮಿಸತಕ್ಕದ್ದು, 5ನೇ ಅಂತಸ್ತಿನಿಂದ ಕಟ್ಟಡ ನಿರ್ಮಾಣ ಮಾಡುವ ಮೊದಲು ಹೆಚ್.ಎ.ಎಲ್.ಇಲಾಖೆಯಿಂದ ಪಡೆದಿರುವ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸುವುದು.

6. ವಿವಿಧ ಇಲಾಖೆಗಳಿಂದ ನೀಡಲಾಗಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

7. ಉದ್ಯಾನವನ ಹಾಗೂ ಬಯಲು ಜಾಗದ ಶುಲ್ಕವನ್ನು ಪಾವತಿಸುವ ಸಂಬಂಧ ಘನ ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯದ ಅಂತಿಮ ಆದೇಶಕ್ಕಾಗಿ ಬದ್ಧರಿರುವುದಾಗಿ ದಿನಾಂಕ: 05-12-2016 ರಂದು ಸಲ್ಲಿಸಿರುವ ಮುಚ್ಚಳಿಕೆ ಪತ್ರದಲ್ಲಿನ ಅಂಶಗಳಿಗೆ ಬದ್ಧರಿರತಕ್ಕದ್ದು.

05/12/16

ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

5/12/16 05/12/16 05/12/16

ಗೆ,
ಮೆ: ಶ್ರೀಮಿತ್ರ ಪ್ರಾಪರ್ಟೀಸ್,
# 7, ಸರ್ವೆ ನಂ. 505/1, 505/2,
ಸನ್‌ಶೈನ್ ಸ್ಕೂಲ್ ಎದುರು,
ಹೊರಮಾವು – ಕಲ್ಕೆರೆ ಮುಖ್ಯರಸ್ತೆ,
ಹೊರಮಾವು, ಬೆಂಗಳೂರು – 560 043.